# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ

# ಸಿ.ಸಿ. ಸಂಖ್ಯೆ: 1041/2025

ಪ್ರಾಸಾ – 7

ಚಾಸಾ – 7

**ಸಾಕ್ಷಿಯು ದಿಃ 18.02.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಹೆಸರು | : | ಡಾಃ ಅರುಣ್ ಆರ್.ಎಂ |
| ತಂದೆಯ ಹೆಸರು | : | ಮಲ್ಲಿಕಾರ್ಜುನಯ್ಯ |
| ವಯಸ್ಸು | : | 51 ವರ್ಷ |
| ವೃತ್ತಿ | : | ವೈದ್ಯಾಧಿಕಾರಿಗಳು |
| ವಾಸಸ್ಥಳ | : | ಮೈಸೂರು |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :-**

ಕಳೆದ 5 ವರ್ಷಗಳಿಂದ ಗುಂಡ್ಲುಪೇಟೆ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 04.09.2022 ರಂದು ಮಧ್ಯಾಹ್ನ 12.30 ರಿಂದ 1.00 ಗಂಟೆ ಸಮಯದಲ್ಲಿ ಚಾಸಾ 1 ರವರು ಹಲ್ಲೆಯ ಹಿನ್ನಲೆಯಲ್ಲಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದು ಅವರನ್ನು ನಾನು ಪರೀಕ್ಷಿಸಲಾಗಿ ಕೆಳಕಂಡ ಗಾಯಗಳು ಕಂಡುಬಂದಿರುತ್ತವೆ.

1. ಮೈ ನೋವು
2. ತಲೆ ನೋವು
3. ಬೆನ್ನು ನೋವು

ಮೇಲ್ಕಂಡ ಗಾಯಗಳು ಸಾಮಾನ್ಯ ಸ್ವರೂಪದ್ದು ಎಂದು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ ಎಂದು ಸಾಕ್ಷಿಯು ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ 5(ಎ) ಎಂದು ಗುರ್ತಿಸಲಾಯಿತು. ಕಲ್ಲು ಮತ್ತು ದೊಣ್ಣೆಯಿಂದ ಹೊಡೆದಾಗ ನಿಪಿ 5 ರಲ್ಲಿ ಹೇಳಿರುವ ಗಾಯಗಳು ಆಗುವ ಸಾಧ್ಯತೆ ಇರುತ್ತದೆ.

**ಪಾಟೀ ಸವಾಲು :– ಆರೋಪಿ ಪರ ವಕೀಲರಿಂದ**

ಚಾಸಾ 1 ರವರ ಹೇಳಿಕೆಯ ಆಧಾರದ ಮೇಲೆ ನಿಪಿ 5 ರಲ್ಲಿ ನಮೂದಿಸಿರುವ ಗಾಯಗಳನ್ನು ಪತ್ತೆ ಹಚ್ಚಿದಿರಿ ಎಂದರೆ ಸಾಕ್ಷಿಯು ಹೇಳಿಕೆ ಆಧಾರದ ಮೇಲೆ ಮತ್ತು ಪರಿಕ್ಷೀಸಿ ಪತ್ತೆ ಹಚ್ಚಿದ್ದೇನೆ ಎಂದು ನುಡಿಯುತ್ತಾರೆ. ಚಾಸಾ 1 ರವರನ್ನು ಪರೀಕ್ಷಿಸಿದಾಗ ಅವರ ಕಣ್ಣಿನ ಬಲಭಾಗ ಮತ್ತು ಎದೆಯ ಭಾಗದಲ್ಲಿ ಯಾವುದೇ ಗಾಯಗಳಾಗಿರಲಿಲ್ಲ ಎಂದರೆ ಸರಿ. ನಿಪಿ 5 ರಲ್ಲಿ ನಮೂದಿಸಿರುವ ಗಾಯಗಳಲ್ಲಿ ಊತ ಮತ್ತು ತರಿಚಿದ ಗಾಯವಾಗಿರುವ ಬಗ್ಗೆ ನಮೂದಿಸಿಲ್ಲ ಮತ್ತು ಆ ರೀತಿ ಗಾಯಗಳಾಗಿದ್ದರೆ ನಮೂದಿಸುತ್ತಿದ್ದೆ ಎಂದರೆ ಸರಿ. ಸಾಮಾನ್ಯವಾಗಿ ಆರೋಗ್ಯವಂತ ವ್ಯಕ್ತಿಯಲ್ಲಿಯೂ ಸಹ ನಿಪಿ 5 ರಲ್ಲಿ ನಮೂದಿಸಿರುವ ಗಾಯಗಳು ಕಂಡು ಬರುತ್ತವೆ ಎಂದರೆ ಸರಿ. ಪೊಲೀಸರಿಗೆ ಅನುಕೂಲವಾಗಲಿ ಎಂದು ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ